**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ356/2024

ಪಿಡಬ್ಲು :1 ಸಿಡಬ್ಲು :1

| | |
|---|---|
| ಸಾಕ್ಷಿಯ ಹೆಸರು | : ಕುಮಾರಿ.ಅಶ್ವತಾ ವಿಜಯ ಮಾದಾರ |
| ತಂದೆಯ ಹೆಸರು | : ಶ್ರೀ ವಿಜಯ ಮಾದಾರ |
| ವಯಸ್ಸು | : 22 ವರ್ಷ |
| ಉದ್ಯೋಗ | : ಮನೆ ಕೆಲಸ |
| ವಾಸ್ತವ್ಯ | : ಪೀರಣವಾಡಿ |
| ದಿನಾಂಕ | : 07-03-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 6 ನನ್ನ ತಾಯಿ. ಚಾಸಾಃ 7 ನನ್ನ ತಂದೆ. ಚಾಸಾಃ 8 ರಿಂದ ಚಾಸಾಃ15 ರವರು ಪರಿಚಯ ಇರುತ್ತದೆ. ಚಾಸಾಃ 12 ಆರೋಪಿತನ ತಂದೆ. ನನ್ನದು ಹಿಂದೂ ಮಾದರ ಜಾತಿಯಾಗಿರುತ್ತದೆ. ಆರೋಪಿತನು ಹಿಂದೂ ಮರಾಠಾ ಜಾತಿಯವನಾಗಿರುತ್ತಾನೆ.

2. ನನ್ನದು ಮೊಬೈಲ ಇದ್ದು ಅದು ಟೆಕ್ನೋ ಸ್ಪಾರ್ಕ ಮೊಬೈಲ ಆಗಿರುತ್ತದೆ. ನನ್ನ ಮೊಬೈಲ ಸಂಖ್ಯೆ 9742623936 ಇರುತ್ತದೆ. ನನ್ನದು ಇನ್ಸಟಾಗ್ರಾಂ ಖಾತೆ ಇದ್ದು ಸದರಿ ಖಾತೆಯ ಹೆಸರು ಸ್ವಾತಿ ಕೋಲಕಾರ ಅಂತಾ ಇರುತ್ತದೆ. 2020 ನೇ ಇಸವಿಯಲ್ಲಿ ಆರೋಪಿತನು ಇನ್ಸಟಾಗ್ರಾಂದಲ್ಲಿ ಪರಿಚಯವಾಗಿರುತ್ತಾನೆ. ಆರೋಪಿತನ ಇನ್ಸಟಾಗ್ರಾಂ ಖಾತೆಯ ಹೆಸರು ಸಂಜು ದಬಾಲೆ ಎಂದು ಇರುತ್ತದೆ. ನಾನು ಜನೇವರಿ 2020 ರಿಂದ ಇನ್ಸಟಾಗ್ರಾಂ ಬಳಸುತ್ತಿದ್ದೆ, ಅದೇ ತಿಂಗಳಲ್ಲಿ ಆರೋಪಿತನು ಇನ್ಸಟಾಗ್ರಾಂದಲ್ಲಿ ಪರಿಚಯವಾಗಿರುತ್ತಾನೆ. ತದನಂತರ ಒಬ್ಬರಿಗೊಬ್ಬರು ಪೋನ ಮಾಡುತ್ತಿದ್ದೇವು ಮತ್ತು ಮುಖಾಮುಖಿ ಆಗಾಗ ಭೇಟಿ ಆಗುತ್ತಿದ್ದೇವು, ಆಗ ನಮ್ಮಿಬ್ಬರಿಗೆ ಸಲಿಗೆ ಬೆಳೆದು ನಾವಿಬ್ಬರೂ ಪ್ರೀತಿ ಮಾಡಲು ಪ್ರಾರಂಭ ಮಾಡಿದೇವು.

3. ದಿಃ 11.12.2023 ರಂದು ಆರೋಪಿತನು ನನಗೆ ಪೋನ ಮಾಡಿ ನಾವಿಬ್ಬರೂ ಮದುವೆ ಆಗೋಣ ನೀನು ಬರದಿದ್ದರೇ ನಾನು ನನ್ನ ಜೀವನಕ್ಕೆ ಅಪಾಯ ಮಾಡಿಕೊಳ್ಳುತ್ತೇನೆ ಅಂತಾ ಹೆದರಿಸಿದನು. ಅವನ ಮಾತು ನಂಬಿ ನಮ್ಮ ತಂದೆ ತಾಯಿಗೆ ತಿಳಿಸಿದೇ ನಾನು ಅದೇ ದಿನ ಸಂಜೆ 7.00 ಗಂಟೆಗೆ ಮನೆ ಬಿಟ್ಟು ಹೋಗಿರುತ್ತೇನೆ. ನಾನು ಮನೆ ಬಿಟ್ಟು ಹೋದ ನಂತರ ನನ್ನ ತಂದೆಯವರು ನಾನು ಕಾಣೆಯಾದ ಬಗ್ಗೆ ದೂರನ್ನು ದಾಖಲಿಸಿದ್ದರು. ಆರೋಪಿತನು ನನ್ನನ್ನು ತನ್ನ ಮೋಟರಸೈಕಲ ಮೇಲೆ ಪಾರ್ಲೆ ಎಂಬ ಗ್ರಾಮದಲ್ಲಿರುವ ಆರೋಪಿತನ ಸಂಬಂಧಿಕರ ಮನೆಗೆ ಕರೆದುಕೊಂಡು ಹೋಗಿ ನನ್ನನ್ನು ಬಿಟ್ಟಿರುತ್ತಾನೆ. ನಾವಿಬ್ಬರೂ ಸದರಿಯವರ ಮನೆಯಲ್ಲಿ ಎರಡು ದಿವಸ ವಾಸವಾಗಿದ್ದೇವು.

4. ನನ್ನ ತಂದೆ ನಾನು ಕಾಣೆಯಾದ ಬಗ್ಗೆ ದೂರು ನೀಡಿದ ವಿಷಯ ಆರೋಪಿತನ ಚಿಕ್ಕಮ್ಮನಿಗೆ ಗೊತ್ತಾಗಿ ಸದರಿಯವರು ನಮ್ಮಿಬ್ಬರಿಗೆ ನಿಮ್ಮ ತಂದೆ ತಾಯಿಗಳ ಜೊತೆ ಮಾತನಾಡಿ ನಿಮ್ಮ ಮದುವೆಯನ್ನು ಮಾಡಿಸುತ್ತೇವೆ ಅಂತಾ ನಂಬಿಸಿ ದಿಃ13.12.2023 ರಂದು ಮಧ್ಯಾಹ್ನ 3.00 ಗಂಟೆಗೆ ನನ್ನನ್ನು ಬೆಳಗಾವಿ ಸಿಟಿ ಬಸ್ ಸ್ಟ್ಯಾಂಡ್‌ಗೆ ಚಾಸಾಃ 10 ರಿಂದ ಚಾಸಾಃ15 ರವರು ಸೇರಿ ಬಂದು ಬಿಟ್ಟು ಹೋಗಿರುತ್ತಾರೆ. ತದನಂತರ ನಾನು ಸಿಟಿ ಬಸ್ ಸ್ಟ್ಯಾಂಡ್‌ನಿಂದ ನೇರವಾಗಿ ನಮ್ಮ ಮನೆಗೆ ಹೋಗಿ ಘಟನೆಯ ವಿಷಯವನ್ನು ನಮ್ಮ ತಂದೆ ತಾಯಿಗೆ ತಿಳಿಸಿದೆನು.

5. ನಾನು ವಿಷಯ ತಿಳಿಸಿದ ನಂತರ ನನ್ನ ತಂದೆ ತಾಯಿ ಸೇರಿ ಆರೋಪಿತನ ಪೋನಗೆ ಕರೆ ಮಾಡಿದ್ದು ಆರೋಪಿತನ ಪೋನ ಸ್ವಿಚ್ ಆಫ್ ಬರುತ್ತಾ ಇತ್ತು, ನಂತರ ನನ್ನ ತಂದೆ ತಾಯಿ ಚಾಸಾಃ 17 ರವರಿಗೆ ಪೋನ ಕರೆ ಮಾಡಿದರು ಆಗ ಚಾಸಾಃ 17 ರವರು ನಮ್ಮ ತಂದೆ ತಾಯಿಗೆ ತಿಳಿಸಿದ್ದೇನೆಂದರೆ ನಿಮ್ಮ ಮಗಳು ಪರಿಶಿಷ್ಟ ಜಾತಿಗೆ ಸೇರಿದವಳಾಗಿದ್ದು ಅವಳನ್ನು ಸಂಜು ಇತನು ಮದುವೆ ಮಾಡಿಕೊಂಡರೆ ಆತನ ತಂದೆ ತಾಯಿ ವಿಷ ಕುಡಿದು ಸಾಯುತ್ತಾರೆ ಅಂತಾ ಬೆದರಿಕೆ ಹಾಕುತ್ತಿದ್ದಾರೆ ಅಂತಾ ತಿಳಿಸಿದನು. ನಾನು ಪರಿಶಿಷ್ಟ ಜಾತಿಗೆ ಸೇರಿದ ಹುಡುಗಿ ಅಂತಾ ಆರೋಪಿ ಸಂಜು ನಾಗಪ್ಪಾದಬಾಲೆ ಇತನಿಗೆ ಮೊದಲೇ ಗೊತ್ತಿದ್ದರೂ ಆತನು ನನ್ನ ಸಂಗಡ ಪ್ರೀತಿ ನಾಟಕ ಮಾಡಿ ನನ್ನ ಸಂಗಡ ಮೂರು ವರ್ಷಗಳಿಂದ ಪ್ರೀತಿ ನಾಟಕ ಮಾಡುತ್ತಾ ಬಂದಿದ್ದ ನಾನು ಆತನಿಗೆ

ಮದುವೆ ಆಗು ಅಂತಾ ಕೇಳಿದಾಗ ನೀನು ಕೀಳು ಜಾತಿಯವಳು ಅಂತಾ ಅಂದು ನನ್ನನ್ನು ಮದುವೆ ಆಗಲು ತಿರಸ್ಕಾರ ಮಾಡಿರುತ್ತಾನೆ.

6. ಆರೋಪಿತನು ನನಗೆ ನನ್ನ ಜಾತಿಯನ್ನು ಮುಂದೆ ಇಟ್ಟುಕೊಂಡು ಆತ ಮೋಸ ಮಾಡುತ್ತಿದ್ದಾನೆ ಅಂತಾ ಕಂಡು ಬಂತು. ಆರೋಪಿತನು ನನಗೆ ಅನ್ಯಾಯ ಮಾಡಿದ್ದರಿಂದ ಆತನ ವಿರುದ್ಧ ಯೋಗ್ಯ ಕಾನೂನು ಕ್ರಮ ಕೈಗೊಂಡು ಸಂಜು ನಾಗಪ್ಪಾದಬಾಲೆ ಜೊತೆ ನನ್ನ ಮದುವೆ ಆಗುವಂತೆ ನ್ಯಾಯ ಒದಗಿಸಿಕೊಡಬೇಕೆಂದು ದಿಃ 14.12.2023 ರಂದು ವಡಗಾಂವ ಪೋಲಿಸ ಠಾಣೆಯಲ್ಲಿ ಪಿರ್ಯಾದಿಯನ್ನು ಕೊಟ್ಟಾಗ ಆರೋಪಿಯ ಸಂಬಂಧಿಕರು ನಾವು ಪ್ರಕರಣವನ್ನು ಸಮ್ಮತಿಯಿಂದ ಬಗೆಹರಿಸಿಕೊಳ್ಳೋಣ ಅಂತಾ ವೇಳೆಯನ್ನು ತೆಗೆದುಕೊಂಡರು. ಅಲ್ಲಿಂದ ಇಲ್ಲಿಯವರೆಗೆ ನಮ್ಮ ಮನೆಯವರು ಆರೋಪಿತನ ಮನೆಯವರನ್ನು ಸಂಪರ್ಕಿಸಲು ಪ್ರಯತ್ನಪಟ್ಟರೂ ಅವರು ಅಲ್ಲಿ ಇದ್ದೇವೆ ಇಲ್ಲಿ ಇದ್ದೇವೆ ಅಂತಾ ವೇಳೆಯನ್ನು ಕಳೆದಿರುತ್ತಾರೆ. ಆದ ಕಾರಣ ನನಗಾದಂತಹ ಅನ್ಯಾಯವನ್ನು ಸರಿಪಡಿಸುವ ಕಾರ್ಯ ಆರೋಪಿತರ ಸಂಬಂಧಿಕರಿಂದ ಬಗೆಹರಿಸಲು ಸಾಧ್ಯವಿಲ್ಲ ಎಂದು ಮನಗೊಂಡು ನಾನು ಪುನಃ ವಡಗಾಂವ ಪೋಲಿಸ ಠಾಣೆಗೆ ಹೋಗಿ ಆರೋಪಿತನ ವಿರುದ್ಧ ದಿಃ 11.03.2024 ರಂದು ಲಿಖಿತವಾದ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಿರ್ಯಾದಿಯಾಗಿದ್ದು, ಅದನ್ನು ನಿಪಿಃ 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ 1ಎ ಎಂದು ಗುರುತಿಸಲಾಯಿತು.

7. ದೂರು ನೀಡಿದ ನಂತರ ಪೋಲಿಸರು ಮೊದಲ ಘಟನಾ ಸ್ಥಳವಾದ ಪೀರಣವಾಡಿ ಗ್ರಾಮದಲ್ಲಿ ಬಂದಿದ್ದು ಆ ದಿನ ಪಂಚರಾಗಿ ಇಬ್ಬರು ವ್ಯಕ್ತಿಗಳು ಸಹ ಹಾಜರಿದ್ದು ಸದರಿಯವರ ಸಮಕ್ಷಮದಲ್ಲಿ ನಾನು ಸ್ಥಳ ತೋರಿಸಿ ಇದೇ ಸ್ಥಳದಲ್ಲಿ ಆರೋಪಿತನು ನನ್ನನ್ನು ಮೋಟರಸೈಕಲ ಮೇಲೆ ಕರೆದುಕೊಂಡು ಹೋದ ಸ್ಥಳ ಎಂದು ಹೇಳಿ ತೋರಿಸಿದ ಮೇರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿ ಪೋಟೋಗಳನ್ನು ತೆಗೆದಿರುತ್ತಾರೆ ಮತ್ತು ಸದರಿ ಸ್ಥಳದಿಂದ ಪಾರ್ಲೆ ಗ್ರಾಮದಲ್ಲಿರುವ

ಆರೋಪಿತನ ಚಿಕ್ಕಮ್ಮಳಾದ ಶ್ರೀಮತಿ. ಲಕ್ಷ್ಮೀ ದೇವಳಿ ರವರ ಮನೆಗೆ ಕರೆದುಕೊಂಡು ಹೋಗಿದ್ದು ಪಂಚರ ಸಮಕ್ಷಮದಲ್ಲಿ ನಾನು ಸ್ಥಳ ತೋರಿಸಿ ಇದೇ ಸ್ಥಳದಲ್ಲಿ ಆರೋಪಿತನು ಮತ್ತು ನಾನು ಎರಡು ದಿವಸ ವಾಸವಾಗಿದ್ದೇವು ಎಂದು ಹೇಳಿ ತೋರಿಸಿದ ಮೇರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿ ಪೋಟೋಗಳನ್ನು ತೆಗೆದಿರುತ್ತಾರೆ. ಅಲ್ಲಿಂದ ಪೋಲಿಸರು ನನ್ನನ್ನು ಬೆಳಗಾವಿ ನಗರದ ಸಿಟಿ ಬಸ್ ಸ್ಟಾಪ ಹತ್ತಿರ ಕರೆದುಕೊಂಡು ಬಂದಿದ್ದು ಅಲ್ಲಿ ಪಂಚರ ಸಮಕ್ಷಮದಲ್ಲಿ ನಾನು ಸ್ಥಳ ತೋರಿಸಿ ಇದೇ ಸ್ಥಳದಲ್ಲಿ ಆರೋಪಿ ಮತ್ತು ಚಾಸಾಃ 10 ರಿಂದ ಚಾಸಾಃ15 ರವರು ಪಾರ್ಲೆ ಗ್ರಾಮದಿಂದ ಕರೆದುಕೊಂಡು ಬಂದು ಬಿಟ್ಟು ಹೋದ ಸ್ಥಳ ಇದೇ ಎಂದು ಹೇಳಿ ತೋರಿಸಿದ ಮೇರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿ ಸಹಿಯನ್ನು ತೆಗೆದುಕೊಂಡು ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಪರಾಧ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ದೋಷಾರೋಪಣೆ ಪುಟ ಸಂಖ್ಯೆ 10 ಮತ್ತು 11 ರಲ್ಲಿ 4 ಪೋಟೋಗಳಿದ್ದು ಅವುಗಳನ್ನು ತೋರಿಸಲಾಗಿ, ಅವುಗಳನ್ನು ನೋಡಿ ಅದರಲ್ಲಿ ತಾನು, ತನ್ನ ತಾಯಿ, ಪೋಲಿಸರು ಹಾಗೂ ಇತರರು ಇರುವುದಾಗಿ ನೋಡಿ ಗುರುತಿಸಿದ್ದು, ಅವುಗಳನ್ನು ಪೀರಣವಾಡಿ ಗ್ರಾಮದಲ್ಲಿ ತೆಗೆದ ಪೋಟೋಗಳೆಂದು ನೋಡಿ ಗುರುತಿಸಿದ್ದು ಆದಕಾರಣ ಸದರಿ ಪೋಟೋಗಳನ್ನು ಅನುಕ್ರಮಾಗಿ ನಿಪಿಃ 3 ರಿಂದ ನಿಪಿಃ 6 ಎಂದು ಗುರುತಿಸಲಾಯಿತು.

8. ಸಾಕ್ಷಿಗೆ ದೋಷಾರೋಪಣೆ ಪುಟ ಸಂಖ್ಯೆ 13 ರಲ್ಲಿ 1 ಪೋಟೋ ಇದ್ದು ಅದನ್ನು ತೋರಿಸಲಾಗಿ, ಅದನ್ನು ನೋಡಿ ಅದರಲ್ಲಿ ತಾನು, ತನ್ನ ತಾಯಿ, ಪೋಲಿಸರು ಹಾಗೂ ಇತರರು ಇರುವುದಾಗಿ ನೋಡಿ ಗುರುತಿಸಿದ್ದು, ಅದನ್ನು ಪಾರ್ಲೆ ಗ್ರಾಮದಲ್ಲಿ ಆರೋಪಿತನ ಚಿಕ್ಕಮ್ಮನ ಮನೆಯ ಹತ್ತಿರ ತೆಗೆದ ಪೋಟೋ ಎಂದು ನೋಡಿ ಗುರುತಿಸಿದ್ದು ಆದಕಾರಣ ಸದರಿ ಪೋಟೋವನ್ನು ನಿಪಿಃ 7 ಎಂದು ಗುರುತಿಸಲಾಯಿತು. ಸಾಕ್ಷಿಗೆ ದೋಷಾರೋಪಣೆ ಪುಟ ಸಂಖ್ಯೆ 15 ರಲ್ಲಿ 1 ಪೋಟೋ ಇದ್ದು ಅದನ್ನು ತೋರಿಸಲಾಗಿ, ಅದನ್ನು ನೋಡಿ ಅದರಲ್ಲಿ ತಾನು, ತನ್ನ ತಾಯಿ, ಪೋಲಿಸರು ಹಾಗೂ ಇತರರು ಇರುವುದಾಗಿ ನೋಡಿ ಗುರುತಿಸಿದ್ದು,

ಅದನ್ನು ಬೆಳಗಾವಿ ನಗರದ ಸಿಟಿ ಬಸ್ ಸ್ಟ್ಯಾಂಡ್ ಹತ್ತಿರ ತೆಗೆದ ಪೋಟೋ ಎಂದು ನೋಡಿ ಗುರುತಿಸಿದ್ದು ಆದಕಾರಣ ಸದರಿ ಪೋಟೋವನ್ನು ನಿಪಿಃ 8 ಎಂದು ಗುರುತಿಸಲಾಯಿತು.

9. ಪಂಚನಾಮೆ ಮಾಡಿದ ನಂತರ ಪೋಲಿಸರು ನನ್ನ ಮರುಹೇಳಿಕೆಯನ್ನು ಪಡೆದುಕೊಂಡಿದ್ದು ಆ ದಿನ ನಾನು ಪೋಲಿಸರಿಗೆ ಆರೋಪಿತನು ದಿಃ13.12.2023 ರಂದು ಸಿಬಿಟಿ ಬಸ್ ಸ್ಟ್ಯಾಂಡ್‌ನಲ್ಲಿ ನನ್ನನ್ನು ಬಿಟ್ಟು ಹೋಗುವಾಗ ಆತನಿಗೆ ನಾನು ನನ್ನನ್ನು ಮದುವೆ ಮಾಡಿಕೊ ಅಂತಾ ಹೇಳಿದ್ದು ಆತ ಆತನು ಮದುವೆ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡು ಕೇಸ ಅಥವಾ ಕಂಪ್ಲೇಂಟ್ ಅಂತಾ ಮುಂದುವರೆಸಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ನನಗೆ ಜೀವದ ಬೆದರಿಕೆ ಹಾಕಿದ ವಿಷಯವನ್ನು ಹೇಳಿರುತ್ತೇನೆ ಮತ್ತು ಪಂಚನಾಮೆಗೆ ಸಹಕರಿಸಿದ ಬಗ್ಗೆ ಹೇಳಿರುತ್ತೇನೆ. ಆರೋಪಿತನು ನನ್ನನ್ನು ಕರೆದುಕೊಂಡು ಹೋದ ಮೋಟರಸೈಕಲ ಸಂಖ್ಯೆ ಕೆಎ–22/ ಈವಿ–2912 ಇರುತ್ತದೆ. ನಾನು ಮತ್ತು ಆರೋಪಿತನು ಇಬ್ಬರೂ ಸೇರಿ ನಿಂತುಕೊಂಡ ಪೋಟೋವನ್ನು ನನ್ನ ಮೊಬೈಲನಲ್ಲಿ ತೆಗೆದಿದ್ದು ಅವುಗಳನ್ನು ಪ್ರಿಂಟ್ ಹಾಕಿಸಿ ಪೋಲಿಸರಿಗೆ ನೀಡಿರುತ್ತೇನೆ. ದೋಷಾರೋಪಣೆ ಪುಟ ಸಂಖ್ಯೆ 23 ರಲ್ಲಿರುವ 4 ಪೋಟೋಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಆದ ಕಾರಣ ಸದರಿ 4 ಪೋಟೋಗಳನ್ನು ಒಟ್ಟಾಗಿ ನಿಪಿಃ 9 ಎಂದು ಗುರುತಿಸಲಾಯಿತು.

10. ದಿಃ 19.03.2024 ರಂದು ಬೆಳಗಾವಿ ಗ್ರಾಮೀಣ ಪೋಲಿಸರು ಬೆಳಗಾವಿಯಲ್ಲಿರುವ ನ್ಯಾಯಾಧೀಶರ ಹತ್ತಿರ ಕರೆದುಕೊಂಡು ಹೋಗಿದ್ದು, ಆಗ ಸದರಿ ನ್ಯಾಯಾಧೀಶರ ಮುಂದೆ ನಾನೇ ಸ್ವತಂತ್ರವಾಗಿ ನಡೆದ ಘಟನೆಯ ಬಗ್ಗೆ ಸವಿಸ್ತಾರವಾಗಿ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಕಡತದಲ್ಲಿ ಬ್ರೌನ ಪೇಪರನಲ್ಲಿ ಪ್ಯಾಕ ಮಾಡಿದ ಒಂದು ದಾಖಲೆ ಇದ್ದು, ಸದರಿ ಬ್ರೌನ ಪೇಪರ ಪ್ಯಾಕನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು 2 ನೇ ನ್ಯಾಯಾಲಯ ಬೆಳಗಾವಿರವರು ಪಡೆದುಕೊಂಡ ಕಲಂ 164 ರ ಹೇಳಿಕೆಯಾಗಿದ್ದು, ಅದನ್ನು ನಿಪಿಃ10 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ10 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:ಆರೋಪಿ ಪರ ಶ್ರೀ. ಎ.ಸಿ.ಕೆ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.